

ಗೋವಿಂದಪ್ಪ. ಅವರು 'ದುಗ್ಗೋಜಿಯವರು ಬೈದರೆ ಮುನಿಯುವವರಲ್ಲ, ಹೊಗಳಿದರೆ ಉಬ್ಬುವವರಲ್ಲ' ಎಂಬ ಅರ್ಥದಲ್ಲಿ ಈ ಪದ ಪ್ರಯೋಗ ಮಾಡಿದರೋ ಏನೋ! ಆ ಮೇಲೆ ಸೀತಾಪುರದ ರಥ ಬೀದಿಯಲ್ಲಿರುವ ಕುಪ್ಪಣ್ಣಯ್ಯನವರ ಹೋಟೇಲಿನಲ್ಲಿ - ಸಂಜೆ ನಾಲ್ಕು ಐದು ಗಂಟೆಯ ಹೊತ್ತಿಗೆ ದಿನಾ ಚಹಾ ಹೀರಲಿಕ್ಕಾಗಿಯೇ ಬರುವ ಮಂದಿಯಲ್ಲಿ - ಕುಪ್ಪಣ್ಣಯ್ಯ ನಗುತ್ತಾ 'ನಮ್ಮ ದುಗ್ಗೋಜಿ ಮಾಸ್ಟ್ರಿಗೆ ಬೆಟ್ಟುಮನೆ ಗೋವಿಂದಪ್ಪ ಒಂದು ಅಡ್ಡ ಹೆಸರು ಇಟ್ಟಿದ್ದಾರೆ ಮಾರಾಯರೇ' ಎಂದು ಹೇಳಿದಾಗ, 'ಹೌದಾ?' ಎಂದು ಅನೇಕರು ಹುಬ್ಬೇರಿಸಿದ್ದರು. ಆ ದಿನಗಳಲ್ಲಿ 'ಗಾಂಧಿವಾದಿ'ಗಳೆಂದು 'ಪೋಸು' ಕೊಡುವವರನ್ನು ಜನ ನೋಡಿ ಬೇಸತ್ತಿದ್ದರು. ಆದರೆ ನಿಜವಾದ ಗಾಂಧಿವಾದಿಯಾದ ಇವರ ಕಾಲ ಅಡಿಗೆ ಅಂಥವರನ್ನು ಹಾಕಬೇಕು ಮಾರಾಯರೇ, ಎಂಬಂತೆ ಆ ದಿನದ ಚರ್ಚೆ ಜೋರಾಗಿತ್ತು. ಹಾಗೆಂದು ಸೀತಾಪುರದಲ್ಲಿ ಯಾರೊಬ್ಬರೂ ದುಗ್ಗೋಜಿ ಮಾಸ್ಟ್ರನ್ನು ಭೌತವಾದಿ ಎಂದು ಸಂಭೋದಿಸಿ ಅವರನ್ನು ಮುಜುಗರಕ್ಕೆ ಈಡು ಮಾಡಿದ್ದಿಲ್ಲ. ನಿಜವಾದ ಗಾಂಧಿವಾದಿ ಎಂಬ ಅರ್ಥದಲ್ಲಿ 'ಭೌತವಾದಿ' ಎಂದು ಅವರ ಹಿಂದಿನಿಂದ ಅವರ ಬಗ್ಗೆ ಆಡಿಕೊಳ್ಳುವವರು ಅಲ್ಲಿ ಇಲ್ಲಿ ಒಬ್ಬಿಬ್ಬರಿದ್ದರು. ಆದರೆ ಒಮ್ಮೆ ಸೀತಾಪುರದ ಬೆನಕ ಕ್ಲಿನಿಕ್ಕಿನ ಡಾಕ್ಟ್ರು ಮೋಹನರಾಯರು 'ಸ್ವಾಮಿ ಮಾಸ್ಟ್ರೆ, ನಿಮ್ಮನ್ನು ಎಲ್ಲರೂ ನಿಮ್ಮ ಹಿಂದಿನಿಂದ ಭೌತವಾದಿ ಎಂದು ಕರೆಯುತ್ತಾರಲ್ಲ? ಯಾಕಂತ ಗೊತ್ತಾ?' ಎಂದು ಧೈರ್ಯದಿಂದ ಪ್ರಶ್ನಿಸಿದ್ದಕ್ಕೆ 'ಏನಾದರೂ ಆಡಿಕೊಳ್ಳಲಿ ಡಾಕ್ಟ್ರೇ ಅವರವರ ಭಾವಕ್ಕೆ ಸರಿಯಾಗಿ ನನ್ನನ್ನು ಹೇಗೆ ಗುರುತಿಸಿದರೂ ಒಂದೇ' ಎಂದಿದ್ದರು ಅವರು. ಆಮೇಲೆ ಡಾಕ್ಟ್ರು ಒಬ್ಬಿಬ್ಬರಲ್ಲಿ ಕೇಳಿದರೆ ಒಬ್ಬರು 'ನಮ್ಮ ಮಾಸ್ಟ್ರು ನಡೆನುಡಿಗಳಲ್ಲಿ ಶುದ್ಧ ಗಾಂಧಿವಾದಿಗಳಾಗಿದ್ದಾರೆ ಡಾಕ್ಟ್ರೇ. ಆದರೆ ಇಂದು ಗಾಂಧಿವಾದಿಗಳು ಎಲ್ಲಿದ್ದಾರೆ? ಯಾರನ್ನಾದರೂ ಆ ರೀತಿ ಕರೆದರೆ ಅದು ಗಾಂಧೀಜಿಗೂ ಮಾಸ್ಟ್ರಿಗೂ ಒಟ್ಟಿಗೆ ಮಾಡುವ ಅವಮಾನವಲ್ಲವೇ? ನಮ್ಮ ದೇಶದಲ್ಲಿ ಇಂಥ ಹತ್ತಾರು ಮಂದಿಯನ್ನು ಬಿಟ್ಟರೆ